Probationery Assistant Engineers.

Q.—303. **Sri D. DEVARAJ URS** (Hunsur)—

Will the Government be pleased to state :—

(*a*) whether they intend taking Probationery Assistant Engineers;

(*b*) if so, when and how many;

(*c*) the names submitted to Government by the Public Service Commission ?

A.—**Sri Kadidal MANJAPPA** (Minister for Revenue and Public Works).—

(*a*) The question is under consideration.

(*b*) Not possible to say at present.

(*c*) This is confidential.

ಶ್ರೀ ಡಿ. ದೇವರಾಜ್ ಅರಸ್.—ಎಷ್ಟು ವರ್ಷಗಳಿಂದ Probationery Assistant Engineersಗಳನ್ನು ನೇಮಕ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ತಿಳಿದು ಬಂದ ಮಟ್ಟಿಗೆ ಸುಮಾರು $1\frac{1}{2}$ ವರ್ಷಗಳಿಂದ.

ಶ್ರೀ ಡಿ. ದೇವರಾಜ್ ಅರಸ್.—Public Service Commissioner ಅವರಿಂದ ಈ ಲಿಸ್ಟು ಬಂದು ಎಷ್ಟು ತಿಂಗಳಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಮಾರ್ಚಿ ತಿಂಗಳಲ್ಲಿ ಬಂತು.

ಶ್ರೀ ಡಿ. ದೇವರಾಜ್ ಅರಸ್.—ಮಾರ್ಚಿ ತಿಂಗಳಲ್ಲಿ ಬಂದ ಮೇಲೆ ಅಕ್ಕೌಂಟೆಂಟ್ ಜನರಲ್ ಕೂಡ ಈ ವಿಷಯವನ್ನು ಇತ್ಯರ್ಥಮಾಡದೆ ಇರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಷ್ಟು ಸುಲಭ ಪ್ರಶ್ನೆಯಲ್ಲ. ಅನೇಕ ವಿಷಯಗಳನ್ನು ಗಣನೆಗೆ ತೆಗೆದು ಕೊಂಡು ತೀರ್ಮಾನಮಾಡಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ Probationers ತೆಗೆದುಕೊಳ್ಳುವುದನ್ನು ಸರ್ಕಾರದವರು ಕೈಬಿಡುತ್ತಾರೆಂದು ಭಾವಿಸೋಣವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಭಾವಿಸಬೇಕಾಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—Public Service Commission ನಿಂದ list ಬಂದಿದೆ ಎಂದು ಅಪ್ಪಣೆಕೊಡಿಸಿದ್ದೀರಿ. ಆ ಪಟ್ಟಿಕೆ Scheduled castes Candidates ಎಷ್ಟು ಜನ ಇದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು confidential ಎಂದು (*c*) ಪ್ರಶ್ನೆಗೆ ಆಗಲೆ ಉತ್ತರ ಕೊಟ್ಟಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರಲ್ಲಿ ಕೆಲವರು Application ಹಾಕಿಕೊಂಡಿದ್ದಾರೆ. ಅವನ್ನು consider ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Public Service Commission ರವರು consider ಮಾಡಿಯೇ ಶಿಫಾರಸುಗಳನ್ನು ಕಳುಹಿಸಿದ್ದಾರೆ. ನಾವೂ ಪರಿಶೀಲಿಸುತ್ತೇವೆ.

———

Construction of Thuppadakkanahalli Tank in Molakalmuru Taluk.

Q.—368. **Sri A. BHEEMAPPA NAIK** (Molakalmuru).—Will the Government be placed to state.—

(*a*) Whether they have investigated the possibilities of constructing a tank known as Tuppadakkanahalli Tank in Molakalmuru Taluk;

(*b*) the stage at which this is pending ?

A.—**Sri Kadidal MANJAPPA** (Minister for Revenue and Public Works).—

(*a*) Yes,

(*b*) The project is under consideration.

ಶ್ರೀ ಎ. ಭೀಮಪ್ಪನಾಯಕ್.—ಈ ಕೆರೆಯನ್ನು ಕಟ್ಟಿಸಲಿಕ್ಕೆ ಬಂದಿರತಕ್ಕ ಅಂದಾಜು ಎಷ್ಟು ?

Sri Kadidal MANJAPPA.—The estimated cost is about Rs. 4·45 lakhs.

ಶ್ರೀ ಎ. ಭೀಮಪ್ಪನಾಯಕ್.—ಈ ಕೆರೆಯಿಂದ ಎಷ್ಟು ಎಕರೆ ಜಮೀನಿಗೆ ನೀರು ಹಾಯಿಸಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕ್.—ಯಾವ ಯಾವ ಗ್ರಾಮಗಳಿಗೆ ಈ ಕೆರೆಯಿಂದ ಪ್ರಯೋಜನವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕ್.—ಈ ಅಣೆಯನ್ನು ಯಾವ ಹಳ್ಳಕ್ಕೆ ಅಡ್ಡಲಾಗಿ ಹಾಕುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಮೊಳಕಾಲ್ಮುರು ತಾಲ್ಲೂಕಿನಲ್ಲಿ ಹರಿಯುವ ಹಳ್ಳಕ್ಕೆ.

ಶ್ರೀ ಎ. ಭೀಮಪ್ಪನಾಯಕ್.—ಯಾವ ಊರಿನ ಹತ್ತಿರ ಈ ಅಣೆಯನ್ನು ಹಾಕುತ್ತೀರಿ?

Sri Kadidal MANJAPPA.—The project is not with the Government now; so, I cannot give the details.

ಶ್ರೀ ಎ. ಭೀಮಪ್ಪನಾಯಕ್.—ಮೊಳಕಾಲ್ಮುರು ತಾಲ್ಲೂಕಿನಲ್ಲಿ ಯಾವಾಗಲೂ ಕ್ಷಾಮ ಪರಿಸ್ಥಿತಿ ಇದೆ. ಆದ್ದರಿಂದ ಅಲ್ಲಿ ಇಂಥ ಕೆರೆಗಳು ಅವಶ್ಯಕವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕ್ಷಾಮ ಪ್ರದೇಶದಲ್ಲಿ ಅಂಥ ಕಾಮಗಾರಿಗಳು ಅವಶ್ಯಕ ಮತ್ತು ಅವುಗಳನ್ನು ತುರ್ತಾಗಿ ಮಾಡಬೇಕೆಂಬುದು ಗೊತ್ತಿದೆ.

ಶ್ರೀ ಎ. ಭೀಮಪ್ಪನಾಯಕ್.—ಕ್ಷಾಮ ನಿವಾರಣಾ ಕಾರ್ಯ ರೂಪವಾಗಿ ಜನಗಳಿಗೆ ಕೆಲಸ ಸಿಕ್ಕುವುದಕ್ಕೋಸ್ಕರ ಈ ಕೆಲಸವನ್ನು ಈ ವರ್ಷವೇ ಪ್ರಾರಂಭ ಮಾಡಲಿಕ್ಕಾಗುತ್ತದೆಯೇ ?

Sri Kadidal MANJAPPA.—We will try to do our best. The Hon'ble member wanted to know the proposed Achkat I have now got the Acrage The proposed achkat will be 220 acres and about 190 acres of land will be submerged.